ನಿ-330
ಪ್ರ-37
146ನೇ ಅಧಿವೇಶನ
ಉತ್ತರ

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿ ರವರ ನಿಯಮ-330 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.</u>

ಪ್ರಶ್ನೆ:-

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ಕ್ಕೆ ಸಂಬಂಧಿಸಿದಂತೆ ನೂರಾರು ದಾವೆಗಳು ವಿವಿಧ ನ್ಯಾಯಾಲಯಗಳಲ್ಲಿ ನಡೆಸಲಾಗುತ್ತಿದ್ದು, ಈ ದಾವೆಗಳಲ್ಲಿ ಬಿಡಿಎ ಹಿತಾಸಕ್ತಿಯನ್ನು ಕಾಪಾಡಲು ವಕೀಲರ ಅವಶ್ಯಕತೆ ಇಲ್ಲದಿದ್ದಲ್ಲಿ ಬಿಡಿಎ ನ ಸಾವಿರಾರು ದಾವೆಗಳನ್ನು ಅನುವಾದಿಸಲು ಬಿಡಿಎ ಪರ ಸಮರ್ಥವಾಗಿ ವಾದ ಮಂಡಿಸಲು ದಕ್ಷ, ಸಮರ್ಥವಾದ ವಕೀಲರ ಅವಶ್ಯಕತೆ ಇರುತ್ತದೆ. ಆದರೆ, ಹಾಲಿ ಇರುವ ವಕೀಲರು ಬಿಡಿಎ ಪರ ಸರಿಯಾದ ವಾದ ಮಂಡಿಸದೇ ಶೇ 90ರಷ್ಟು ದಾವೆಗಳಲ್ಲಿ ಬಿಡಿಎ ಗೆ ಹಿನ್ನಡೆಯುಂಟಾಗಿದ್ದು, ಇದರಿಂದಾಗಿ ಬಿಡಿಎ ಆಸ್ತಿಯು ಪಟ್ಟಭದ್ರ ಹಿತಾಸಕ್ತಿಗಳ, ದಲ್ಲಾಳಿಗಳ ಹಾಗೂ ವಂಚನೆ ಮಾಡುವವರ ಪಾಲಾಗುತ್ತಿದೆ. ಇದನ್ನು ತಪ್ಪಿಸಲು ಬಿಡಿಎಗೆ ವಕೀಲರ ನೇಮಕಾತಿಯಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ, ಅರ್ಹತೆಯುಳ್ಳ ವಕೀಲರನ್ನು ನೇಮಿಸಿಕೊಳ್ಳಬೇಕಾಗಿರುವ ಮಾನದಂಡನೆಗಳ ಬಗ್ಗೆ.

ಉತ್ತರ:-

ಮಾನ್ಯ ನ್ಯಾಯಾಲಯಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ದಾಖಲಾಗುವ ಪ್ರಕರಣಗಳನ್ನು ನಿರ್ವಹಣೆ ಮಾಡಲು ಖಾಸಗಿ ವಕೀಲರನ್ನು ನಿಗಧಿತ ವೃತ್ತಿ ಶುಲ್ಕದಡಿಯಲ್ಲಿ ಪ್ರಾಧಿಕಾರದ ಕಾನೂನು ಪ್ಯಾನಲ್‌ನಲ್ಲಿ ಸೇರಿಸಿಕೊಳ್ಳಲಾಗುತ್ತಿದೆ. ಇಂತಹ ವಕೀಲರನ್ನು ಕಾನೂನು ಪ್ಯಾನಲ್‌ನಲ್ಲಿ ಸೇರಿಸಿಕೊಳ್ಳುವ ಪೂರ್ವದಲ್ಲಿ ಯಾವುದೇ ಅರ್ಹತಾ ಲಿಖಿತ ಪರೀಕ್ಷೆಯಿರುವುದಿಲ್ಲ ಹಾಗೂ ಇಂತಹ ವಕೀಲರನ್ನು ನೇಮಿಸುವಾಗ ಅವರ ವಿದ್ಯಾರ್ಹತೆಗೆ ತಕ್ಕಂತೆ ಅಂದರೆ ಕನಿಷ್ಠ 7 ರಿಂದ 8 ವರ್ಷಗಳ ವಕೀಲಿ ವೃತ್ತಿ ಅನುಭವ ಹಾಗೂ ಸೇವಾ ಹಿರಿತನವನ್ನು ಆಧರಿಸಿ, ಪ್ರಾಧಿಕಾರದ ಕಾನೂನು ಪ್ಯಾನಲ್‌ನಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಕಾನೂನು ಪ್ಯಾನಲ್‌ನಲ್ಲಿರುವ ಈ ವಕೀಲರುಗಳು ಪ್ರಾಧಿಕಾರದ ವಿರುದ್ಧ ದಾಖಲಾಗುವ ಪ್ರಕರಣಗಳಲ್ಲಿ ಖಾಸಗಿಯಾಗಿ ಪ್ರತಿನಿಧಿಸದಂತೆ ನಿರ್ಬಂಧ ಹೇರಲಾಗಿದೆ.

ಈ ವಕೀಲರುಗಳ ಕಾರ್ಯನಿರ್ವಹಣೆಯ ಬಗ್ಗೆ ಆಗಾಗ್ಗೆ ಪರಾಮರ್ಶಿಸಲಾಗುತ್ತಿದೆ. ಪ್ರತಿನಿತ್ಯ ಕೆಲವೊಂದು ಪ್ರಮುಖ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಪ್ರಾಧಿಕಾರದ ಕಾನೂನು ಅಧಿಕಾರಿಗಳು ಸಹಾ ಹಾಜರಿದ್ದು, ಪ್ರಾಧಿಕಾರದ ವಕೀಲರು ಸಲ್ಲಿಸುವ ವಾದಗಳನ್ನು ಹಾಗೂ ವಕೀಲರ ಕಾರ್ಯಕ್ಷಮತೆಯನ್ನು ಅವಲೋಕಿಸುತ್ತಾರೆ. ಪ್ರಾಧಿಕಾರದ ಹಿತಾಸಕ್ತಿಗೆ ಅರ್ಹರಲ್ಲದ ವಕೀಲರನ್ನು ಆಗಿಂದಾಗ್ಗೆ ಗುರುತಿಸಿ ಪ್ರಾಧಿಕಾರದ ವಕೀಲರ ಪ್ಯಾನಲ್‌ನಿಂದ ಕೈಬಿಡಲಾಗುತ್ತದೆ.

ಪ್ರಸಕ್ತ ಸಾಲಿನಲ್ಲಿ ಸುಮಾರು 50 ರಿಂದ 60 ಜನ ವಕೀಲರನ್ನು ತಂಡದಿಂದ ಕೈಬಿಡಲು ಏಪ್ರಿಲ್ ತಿಂಗಳಲ್ಲಿ ಪರಿಶೀಲಿಸಿ ನೋಟೀಸ್‌ಗಳನ್ನು ನೀಡಲಾಗಿದೆ. ಆ ಪ್ರಕಾರ ನೋಟೀಸ್ ಪಡೆದ ಹೆಚ್ಚಿನ ಪ್ಯಾನಲ್‌ನ ವಕೀಲರುಗಳು ಅವರುಗಳು ನಡೆಸುತ್ತಿರುವ ಪ್ರಕರಣಗಳ ಕಡತಗಳನ್ನು ವಾಪಸ್ಸು ಮಾಡಿರುತ್ತಾರೆ. ಅಂತಹ ಪ್ರಕರಣಗಳನ್ನು ಉಳಿದ ಪ್ಯಾನಲ್ ವಕೀಲರುಗಳಿಗೆ ಮರುಹಂಚಿಕೆ ಮಾಡಲಾಗಿದೆ. ಈ ಮಧ್ಯೆ, ಪ್ರಾಧಿಕಾರದಲ್ಲಿ ಪ್ಯಾನಲ್ ವಕೀಲರುಗಳನ್ನು 50 ಸಂಖ್ಯೆಗೆ ಸೀಮಿತಗೊಳಿಸಲಾಗಿದೆ. ಪ್ರಸ್ತುತ ಇರುವ ಪ್ರಾಧಿಕಾರದ ಪ್ಯಾನಲ್ ವಕೀಲರನ್ನು ಅಡ್ವೋಕೇಟ್ ಜನರಲ್ ರವರ ಕಛೇರಿಯ ಸಹಯೋಗದೊಂದಿಗೆ ರೂಪಿಸಲಾಗಿದೆ.

ಪ್ರಾಧಿಕಾರದ ವಕೀಲರ ತಂಡವನ್ನು ಬಲವರ್ಧನೆ ಮಾಡಲು ಎಲ್ಲಾ ಅಗತ್ಯ ಕ್ರಮಕೈಗೊಳ್ಳಲಾಗುತ್ತಿದ್ದು, ನುರಿತ ವಕೀಲರನ್ನು ಮಾತ್ರ ತಂಡದಲ್ಲಿ ಸೇರ್ಪಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಪ್ರಾಧಿಕಾರದ ನ್ಯಾಯಾಲಯದ ಪ್ರಕರಣಗಳನ್ನು ನಿರ್ವಹಿಸುವ ಬಗ್ಗೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು ಆಲೋಚಿಸಲಾಗುತ್ತಿದೆ. ಕೆಲವೊಂದು ಕಾನೂನು ಅಂಶಗಳನ್ನು ಒಳಗೊಂಡ ಪ್ರಕರಣಗಳಲ್ಲಿ ಪ್ರಾಧಿಕಾರದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಹಿರಿಯ ವಕೀಲರ ಸೇವೆಯನ್ನು ಪಡೆದುಕೊಳ್ಳಲಾಗುತ್ತಿದೆ. ಇತ್ತೀಚಿನ ವರದಿಯನ್ನು ಅವಲೋಕಿಸಿದಲ್ಲಿ ಪ್ರಾಧಿಕಾರದ ವಕೀಲರ ಕಡೆಯಿಂದ ಯಾವುದೇ ಹಿನ್ನಡೆಯಾಗಿರುವುದು ಕಂಡುಬಂದಿರುವುದಿಲ್ಲ.

---

ನಅಇ 56 ಬೆಂಆಸೇ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿಗಳು